**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ- 577 222, ☎ 08182-246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಮಾರುಕಟ್ಟೆ/ಕ್ಷೀ.ಭಾ./ಟೆಂಡರ್/2415A/2020-21 ದಿನಾಂಕ: 10.07.2020

**-: *ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ಪುಡಿ ಸಾಗಾಣಿಕೆ ಮಾಡಲು ಎರಡು ವರ್ಷ ಅವಧಿಗೆ ಗುತ್ತಿಗೆ ಆಧಾರದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ* :-**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ **"ಕ್ಷೀರಭಾಗ್ಯ"** ಯೋಜನೆಯಡಿ ಚನ್ನರಾಯಪಟ್ಟಣ, ಧಾರವಾಡ, **ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಹಾಗೂ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ** ಆಯಾ ತಾಲ್ಲೂಕಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಸರಬರಾಜು ಮಾಡಲು ಎರಡು ವರ್ಷದ ಅವಧಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು, ಆಸಕ್ತರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| | | |
|---|---|---|
| **1** | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 13.07.2020 ರಿಂದ** |
| **2** | **ಟೆಂಡರ್ ಫಾರಂಗಳನ್ನು ಇ-ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | **ದಿನಾಂಕ: 29.07.2020 ರಂದು ಸಂಜೆ: 17.30 ಗಂಟೆಯವರೆಗೆ** |
| **3** | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **ದಿನಾಂಕ: 31.07.2020 ರಂದು ಬೆಳಿಗ್ಗೆ: 11.30 ಗಂಟೆಗೆ** |
| **4** | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **ದಿನಾಂಕ: 03.08.2020 ರಂದು ಬೆಳಿಗ್ಗೆ: 11.30 ಗಂಟೆಗೆ** |

## I. ಹಾಲಿನಪುಡಿ ಮಾರ್ಗಗಳ ವಿವರ (ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ) :-

| ಕ್ರ.ಸಂ | ಮಾರ್ಗಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. | ಶಾಲೆಗಳ ಸಂಖ್ಯೆ (ಅಂದಾಜು) | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) |
|---|---|---|---|---|---|
| 1 | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ಆಯಾ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು. (ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ) | 1,80,000/- | 3,50,000/- | 1965 | 54,000 |

ಮುಂದುವರೆದಿದೆ.,

**"ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನಪುಡಿ ಸರಬರಾಜು ಮಾರ್ಗಗಳ ಷರತ್ತು ಮತ್ತು ನಿಬಂಧನೆಗಳು" :–**

1. ಅರ್ಜಿದಾರರು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಕೆ.ಜಿ ಗೆ ನಮೂದಿಸುವುದು.
2. **ಅರ್ಜಿದಾರರು ಅರ್ಜಿ ಸಲ್ಲಿಸುವಾಗ ಪಾನ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ಟೆಕ್ನಿಕಲ್ ಟೆಂಡರ್ ಅರ್ಜಿಯನ್ನು ಸಹಿಯೊಂದಿಗೆ ತಪ್ಪದೇ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ**
3. ಹಾಲಿನ ಪುಡಿಯನ್ನು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ದರದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮತ್ತು ಟೋಲ್ ವೆಚ್ಚವು ಸೇರಿರುತ್ತದೆ.
4. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡುವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ಹಾಲಿನ ಪುಡಿಯನ್ನು ಯಾವುದೇ ವಿಳಂಬ ಮಾಡದೇ ಸರಬರಾಜಿಗೆ ಕ್ರಮವಿಡುವುದು.
5. **ಯಶಸ್ವಿಯಾದ ಗುತ್ತಿಗೆದಾರರು ಕಚೇರಿ ಆದೇಶವನ್ನು ಪಡೆಯುವಾಗ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಹಾಲಿನ ಪುಡಿ ದಾಸ್ತಾನು ಮಾಡುವ *ಗೋದಾಮಿನ ವಿಳಾಸವನ್ನು* ನೀಡತಕ್ಕದ್ದು, ಗೋದಾಮಿನ ಮಾಲೀಕರೊಂದಿಗೆ ಮಾಡಿಕೊಂಡ ಬಾಡಿಗೆ ಕರಾರು ಒಪ್ಪಂದದ ಪ್ರತಿಯನ್ನು ಕಚೇರಿಗೆ ನೀಡತಕ್ಕದ್ದು ಅಥವಾ ಸ್ವಂತ ಗೋದಾಮು ಹೊಂದಿದ್ದಲ್ಲಿ ಗೋದಾಮಿನ ವಿಳಾಸದೊಂದಿಗೆ ಸ್ವಂತ ಗೋದಾಮು ಹೊಂದಿರುವ ಬಗ್ಗೆ ಅಗತ್ಯ ದಾಖಲಾತಿಗಳನ್ನು ಕಚೇರಿಗೆ ನೀಡತಕ್ಕದ್ದು.**
6. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
7. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
8. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು
9. ಹಾಲಿನ ಪುಡಿಯನ್ನು ಕಳುಹಿಸಿದ 3 ದಿನದೊಳಗೆ ಎಲ್ಲಾ ಶಾಲೆಗಳಿಗೆ ಹಾಲಿನ ಪುಡಿಯನ್ನು ವಿತರಿಸಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ / ಇಲಾಖೆಯ ಅಧಿಕಾರಿಗಳಿಂದ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿ ಪತ್ರವನ್ನು (ಸ್ವೀಕೃತಿ ಪತ್ರವು ಮೂರು ಪ್ರತಿ ಹೊಂದಿರುತ್ತದೆ) ಒಕ್ಕೂಟದಿಂದ ನೀಡುವ ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ ಪಡೆದು 5 ದಿನದೊಳಗೆ ಒಕ್ಕೂಟಕ್ಕೆ ಸಲ್ಲಿಸುವುದು.
10. ಹಾಲಿನ ಪುಡಿ ತಲುಪಿರುವ ಬಗ್ಗೆ ಆಯಾ ತಾಲ್ಲೂಕಿನ ಸಹಾಯಕನಿರ್ದೇಶಕ (ಅಕ್ಷರದಾಸೋಹ) / ಬಿ.ಇ.ಓ ರವರಿಂದ ದೃಢೀಕರಣ ಪಡೆದು ಕಡ್ಡಾಯವಾಗಿ ಕಚೇರಿಗೆ ಸಲ್ಲಿಸುವುದು.
11. ಟೆಂಡರ್ ವಿಧಿವಿಧಾನಗಳನ್ನು ಪೂರೈಸಿ, ಗುತ್ತಿಗೆ ಆದೇಶ ಪಡೆಯಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
12. ಗುತ್ತಿಗೆ ಕರಾರಿನನ್ವಯ ಕಚೇರಿ ಆದೇಶದಲ್ಲಿ ಸೂಚಿಸುವ ಅವಧಿಯವರೆಗೆ ಸಂಬಂಧ ಪಟ್ಟ ಮಾರ್ಗಕ್ಕೆ ಹಾಲಿನ ಪುಡಿ ಸರಬರಾಜು ಮಾಡತಕ್ಕದ್ದು. ಇಲ್ಲವಾದಲ್ಲಿ ತಮ್ಮ ಭದ್ರತಾ ಠೇವಣಿಯನ್ನು ಮಟ್ಟುಗೊಲು ಮಾಡಿಕೊಂಡು ಗುತ್ತಿಗೆಯನ್ನು ರದ್ದು ಪಡಿಸಲಾಗುವುದು.
13. ಅಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ.
14. ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಪಡೆದ ನಂತರ **ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ (FSSAI)** ಪರವಾನಗಿಯನ್ನು ಪಡೆದು ಕಚೇರಿಗೆ ಸಲ್ಲಿಸುವುದು.

ಮುಂದುವರೆದಿದೆ.,

15. ಡೀಸೆಲ್ ದರವು ಹೆಚ್ಚು ಅಥವಾ ಕಡಿಮೆಯಾದಲ್ಲಿ **ಸಾಗಾಣಿಕೆ ದರವನ್ನು** ಪರಿಷ್ಕರಿಸಲಾಗುವುದು.
16. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಒಕ್ಕೂಟವು ಹೊರಡಿಸುವ ನಿಯಮಗಳನ್ನು ತಮಗೂ ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು. ಅನಿವಾರ್ಯ ಸಂದರ್ಭಗಳಲ್ಲಿ ಗುತ್ತಿಗೆ ಒಪ್ಪಂದವನ್ನು ರದ್ದುಗೊಳಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.
17. ಸಾಗಾಣಿಕೆ ಬಿಲ್ಲನ್ನು ***ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ*** ಇವರ ಹೆಸರಿಗೆ ಪಾವತಿಗೆ ಕೋರಿ ಸಲ್ಲಿಸುವುದು.
18. ಯಾವುದಾದರೂ ತಂಟೆ ತಕರಾರುಗಳು ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥ ಮಾಡಿಕೊಳ್ಳುವುದು.
19. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಪುಸ್ತಕದಲ್ಲಿ ಲಭ್ಯವಿರುತ್ತದೆ.
20. ಗುತ್ತಿಗೆ ಒಪ್ಪಂದವು 2 ವರ್ಷದ ಅವಧಿಯವರೆಗೆ ಇದ್ದು, ಸೇವೆ ತೃಪ್ತಿಕರವಾಗಿದ್ದಲ್ಲಿ ಒಪ್ಪಂದದ ಅವಧಿ ಮುಕ್ತಾಯಗೊಂಡ ನಂತರ ಒಕ್ಕೂಟದ ವಿವೇಚನೆ ಮೇರೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ಒಪ್ಪಂದದ ಅವಧಿಯನ್ನು 3 ತಿಂಗಳು ವಿಸ್ತರಿಸುವ ಅಧಿಕಾರವು ಒಕ್ಕೂಟಕ್ಕಿರುತ್ತದೆ ಹಾಗೂ ಪ್ರಕೃತಿ ವಿಕೋಪ, ತುರ್ತು ಸಂದರ್ಭ ಮತ್ತು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಒಕ್ಕೂಟವು ತನ್ನ ವಿವೇಚನೆ ಮೇರೆಗೆ ಮತ್ತೆ 3 ತಿಂಗಳು ಗುತ್ತಿಗೆ ಒಪ್ಪಂದವನ್ನು ಮುಂದುವರೆಸುವ ಅಧಿಕಾರವನ್ನು ಹೊಂದಿರುತ್ತದೆ.
21. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ
22. **"ಕ್ಷೀರಭಾಗ್ಯ"** ಯೋಜನೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಒಕ್ಕೂಟದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರವು ಯಾವುದೇ ಹಂತದಲ್ಲಿ ಯೋಜನೆಯನ್ನು ನಿಲ್ಲಿಸಿದ್ದಲ್ಲಿ ಅಥವಾ ಯಾವುದೇ ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಅನುಗುಣವಾಗಿ ಕ್ರಮವಿಡಲಾಗುವುದು.

**"ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು."**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344**. ಮತ್ತು ಒಕ್ಕೂಟದ ವೆಬ್‌ಸೈಟ್ **www.shimul.coop** ಸಂಪರ್ಕಿಸಬಹುದು.

**ಸಹಿ/–**

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ : 10.07.2020
ಸ್ಥಳ : ಶಿವಮೊಗ್ಗ ಡೈರಿ